OS No. 64/2016 DW-**1**

**ದಿನಾಂಕ 22.05.2023 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಃ ವಾದಿ ಪರ ವಕೀಲರಿಂದ ಃ**

ನಿಪಿ-15 ರ ಆರ್ ಟಿ ಐ ಅಡಿಯಲ್ಲಿ ಪಡೆದುಕೊಂಡ ದಾಖಲೆಯಲ್ಲಿರುವ ಸಾವಿತ್ರಮ್ಮ ರವರ ಚುನಾವಣಾ ಗುರುತಿನ ಚೀಟಿಯಲ್ಲಿ ಇಸವಿ/ವರ್ಷವನ್ನು ನಮೂದಿಸುವಲ್ಲಿ 95 ಅನ್ನು ಹೊಡೆದು ಹಾಕಿ 38 ಎಂದು ನಮೂದಿಸಿರುತ್ತಾರೆಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ ಅದನ್ನು ಸಾವಿತ್ರಮ್ಮರವರ ಮೊಮ್ಮಕ್ಕಳು ತಂದು ಕೊಟ್ಟಿರುತ್ತಾರೆಂದು ನುಡಿಯುತ್ತಾರೆ. ಮಾಹಿತಿ ಹಕ್ಕು ಕಾಯ್ದೆ ಅಡಿಯಲ್ಲಿ ಸಲ್ಲಿಸಿದ ಅರ್ಜಿಗೆ ಸಾರ್ವಜನಿಕ ಮಾಹಿತಿ ಹಕ್ಕು ಅಧಿಕಾರಿಯವರು ಸಾವಿತ್ರಮ್ಮ ಎಂಬುವವರಿಗೆ ನೀಡಲಾಗಿದೆ ಎನ್ನುವ ಮತದಾರರ ಗುರುತಿನ ಚೀಟಿ ಸಂಖ್ಯೆ ಕೆಟಿ/11/089/1155187 ಸಂಖ್ಯೆಯ ನಕಲು ಪ್ರತಿ ತಿದ್ದುಪಡಿ ಮಾಡಿದ್ದು ಸದರಿ ಗುರುತಿನ ಚೀಟಿಯ ಸಂಖ್ಯೆ ಗಣೀಕೃತವಾಗಿರುವುದಿಲ್ಲ ಎಂದು ಮಾಹಿತಿ ನೀಡಿರುತ್ತಾರೆಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಚುನಾವಣಾ ಗುರುತಿನ ಚೀಟಿಯ ಪ್ರಕಾರ 11.12.38 ಕ್ಕೆ ಸಾವಿತ್ರಮ್ಮ ರವರಿಗೆ 77 ವರ್ಷಗಳು ಆಗಿದ್ದಲ್ಲಿ ನಿಡಿ-4 ರ ಕ್ರಯ ಪತ್ರ ಆಗುವ ಕಾಲಕ್ಕೆ ಸದರಿ ಅವರಿಗೆ 154 ವರ್ಷಗಳು ಆಗಬೇಕಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿಡಿ-4 ರ ಕ್ರಯ ಪತ್ರ ಆಗಿರುವ ವಿಚಾರ ವಾದಿಗೆ ಗೊತ್ತಾದ ನಂತರ ಅವರು ದಿನಾಂಕ 25.11.2015 ರಂದು ಚನ್ನಪಟ್ಟಣ ಟೌನ್ ಪೋಲಿಸ್ ಠಾಣೆಯಲ್ಲಿ ನನ್ನ ವಿರುದ್ಧ ದೂರನ್ನು ನೀಡಿರುತ್ತಾರೆಂದರೆ ಸರಿ. ಸದರಿ ದೂರು ಸಲ್ಲಿಸಿದ ನಂತರ ನಾನು ವಾದಿ ಮತ್ತು ಅವರ ಮಕ್ಕಳು ಸೇರಿ ಒಂದು ಒಪ್ಪಿಗೆ ಪತ್ರವನ್ನು ಮಾಡಿಕೊಂಡಿರುತ್ತೇವೆ ಎಂದರೆ ಗೊತ್ತಿಲ್ಲ. ಸದರಿ ಒಪ್ಪಿಗೆ ಪತ್ರದ ಪ್ರಕಾರ ನಿಡಿ-4 ರಲ್ಲಿ ಹೇಳಿರುವ ಸ್ವತ್ತನ್ನು ಒಳಗೊಂಡಂತೆ ಎ ಷಡ್ಯೂಲ್ ಆಸ್ತಿಯನ್ನು ನಾನೇ ಖರೀದಿ ಮಾಡಲು ಒಪ್ಪಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಒಪ್ಪಿಗೆ ಪತ್ರದ ಪ್ರಕಾರ 3 ತಿಂಗಳ ಒಳಗೆ ನಡೆದುಕೊಳ್ಳದ ಕಾರಣ ದಿನಾಂಕ 16.03.2016 ರಂದು ವಾದಿ ನಿಡಿ-18 ರ

ಪ್ರಕಾರ ನೋಟೀಸನ್ನು ನೀಡಿರುತ್ತಾರೆಂದರೆ ಇಲ್ಲ. ಸದರಿ ನೋಟೀಸ್ ದಿನಾಂಕ 17.03.2016 ರಲ್ಲಿ Article delivered ಎಂದು ನಿಪಿ-20 ರಂತೆ ಹಿಂಬರಹ ನೀಡಿರುತ್ತಾರೆಂದರೆ ನನಗೆ ನೋಟೀಸ್ ಬಂದಿಲ್ಲ ಎಂದು ನುಡಿಯುತ್ತಾರೆ . ನನಗೆ ನೋಟೀಸ್ ತಲುಪಿದೆ ಮತ್ತು ಸದರಿ ನೋಟೀಸ್ ನಲ್ಲಿರುವ ವಿಚಾರಗಳು ತಿಳಿದಿದೆ ಆದರೂ ಕೂಡ ನಾನು ಉದ್ದೇಶಪೂರ್ವಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ-4 ರ ಕ್ರಯ ಪತ್ರದಲ್ಲಿ ನಮೂದಿಸಿರುವ ಸ್ವತ್ತಿನ ಷಡ್ಯೂಲನ್ನು ಹೇಳಲು ನನಗೆ ನೆನಪಿಲ್ಲ. ನಿಡಿ-4 ರ ಕ್ರಯ ಪತ್ರದಲ್ಲಿ ಪೂರ್ವಕ್ಕೆ ರಸ್ತೆ ಎಂದು ತಪ್ಪಾಗಿ ನಮೂದಿಸಿರುತ್ತೇವೆ ಆದರೆ ಪೂರ್ವಕ್ಕೆ 15*40 ಅಡಿಗೆ ಎ ಷಡ್ಯೂಲ್ ಆಸ್ತಿಯ ಖಾಲಿ ಜಾಗ ಇದೆ ಎಂದರೆ ಸರಿಯಲ್ಲ. ನಿಡಿ-4 ರ ಕ್ರಯ ಪತ್ರದ 5 ಪುಟಗಳಲ್ಲಿರುವ ಹೆಬ್ಬಟ್ಟಿನ ಗುರುತು ವಾದಿ ಸಾವಿತ್ರಮ್ಮರವರ ಹೆಬ್ಬಟ್ಟಿನ ಗುರುತು ಅಲ್ಲ ಎಂದರೆ ಅದು ಸಾವಿತ್ರಮ್ಮರವರ ಹೆಬ್ಬಟ್ಟಿನ ಗುರುತು ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಡಿ-4 ರಲ್ಲಿರುವ ಬರೆದುಕೊಡುವವರ ಪೋಟೋವನ್ನು ಮತ್ತು ಈ ದಿನ ಹಾಜರುಪಡಿಸಿದಂತಹ 2 ಪೋಟೋಗಳನ್ನು ನೋಡಿ ತಾಳೆ ಮಾಡಿ ತಮಗೆ ದಾಖಲೆ ಮಾಡಿಕೊಟ್ಟವರನ್ನು ಗುರುತಿಸಿ ಎಂದರೆ ಸಾಕ್ಷಿ ನಿಡಿ-4 ರಲ್ಲಿ ನೋಡಿ ಗುರುತಿಸಲು ಸಾಧ್ಯವಿದೆ ಆದರೆ ಈಗ ಹಾಜರುಪಡಿಸಿದಂತಹ ಕಲರ್ ಪೋಟೋವನ್ನು ನೋಡಿ ಗುರುತಿಸಲು ಸಾಧವಿಲ್ಲ ಎಂದು ನುಡಿಯುತ್ತಾರೆ. ನಿಡಿ-4 ರಲ್ಲಿ ಕಂಡು ಬರುವ ವ್ಯಕ್ತಿ ಸಾವಿತ್ರಮ್ಮ ಕೋಂ ಎಂ ಪಿ ಕೃಷ್ಣಮೂರ್ತಿ ಅಲ್ಲ ಆದರೆ ಅವರು ಸಾವಿತ್ರಮ್ಮ ಎನ್ನುವ ಇನ್ನೊಬ್ಬ ಮಹಿಳೆ ಎಂದರೆ ಸರಿಯಲ್ಲ. ಸಬ್ ರಿಜಿಸ್ಟರ್ ಕಛೇರಿಯಿಂದ ಸಿಡಿಯನ್ನು ತಂದು ಹಾಜರುಪಡಿಸಿದರೆ ವಾದಿ ಸಾವಿತ್ರಮ್ಮರವರೇ ಬಂದು ಕ್ರಯ ಪತ್ರ ಬರೆದುಕೊಟ್ಟಿರುತ್ತಾರೆಯೇ ಅಥವಾ ಅವರ ಹೆಸರಿನ ಬೇರೆ ಮಹಿಳೆ ಬಂದು ಕ್ರಯ ಪತ್ರ ಬರೆದುಕೊಟ್ಟಿರುತ್ತಾರೆಯೇ ಎನ್ನುವ ವಿಚಾರ ತಿಳಿಯುತ್ತದೆ ಎಂದರೆ ಸರಿ. ನಾನು ಹಾಜರುಪಡಿಸಿರುವ ನಿಡಿ-9 ರ ಅಳತೆ ಕಾಲಂ ನಲ್ಲಿ( ಕಲಂ ನಂಬರ್ 4 ರಲ್ಲಿ) (1). 12*40, (2). 6.5*33 1/2 (3). 54.5*40 ಖಾಲಿ ಜಾಗ ಎಂದು ನಮೂದಿಸಿರುತ್ತಾರೆಂದರೆ ಹೌದು. 12*40 ರ ಖಾಲಿ ಜಾಗ ಸದರಿ ನಿಡಿ-4 ರ ಕ್ರಯ ಪತ್ರದಲ್ಲಿ ನಮೂದಿಸಿರುವ ಆಸ್ತಿಯ ಪೂರ್ವದ ಕಡೆಗೆ ಇರುವ ಖಾಲಿ ಜಾಗ ಎಂದರೆ ಸರಿಯಲ್ಲ ಉತ್ತರದ ಕಡೆಗೆ ಇರುವ ಖಾಲಿ ಜಾಗ. 2 ನೇ ಕಾಲಂ ನಲ್ಲಿ ಹೇಳಿರುವ

6.5*33 1/2 ಖಾಲಿ ಜಾಗ ಉತ್ತರದ ಕಡೆಗೆ ಇರುವ ಖಾಲಿ ಜಾಗ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಕಲಂ 3 ರಲ್ಲಿ ನಮೂದಿಸಿರುವ 54.5*40 ಖಾಲಿ ಜಾಗ ನಿಡಿ-4 ರಲ್ಲಿ ನಮೂದಿಸಿರುವ ಆಸ್ತಿಯ ದಕ್ಷಿಣ ಭಾಗದಲ್ಲಿರುವ ಖಾಲಿ ಜಾಗ ಎಂದರೆ ಸರಿಯಲ್ಲ.

ಸಮಯಾವಕಾಶ ಕೋರಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.